ಓ ಎಸ್ ನಂ 49/2019

ಪಿ. ಡಬ್ಲ್ಯೂ : 2

ದಿಃ 22.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 2 ರಿಂದ 4 ರವರ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ

ನಾನು ಪತ್ರ ಬರೆಸಲು ಛಾಪಾ ಕಾಗದವನ್ನು ನೆಲಮಂಗಲದ ಸೊಸೈಟಿಯಿಂದ ಪಡೆದಿದ್ದೇವೆ. ಪಾರ್ಶ್ವನಾಥ ಸೊಸೈಟಿಯಲ್ಲಿ ಸ್ಟ್ಯಾಂಪ್ ಪಡೆದಿದ್ದೇವೆ. ಸದರಿ ಸ್ಟ್ಯಾಂಪ್ ಪೇಪರ್ ರೂ. 500 ಬೆಲೆಯದ್ದಾಗಿತ್ತು. ನೆಲಮಂಗಲದಿಂದ ಸ್ಟ್ಯಾಂಪ್ ಪೇಪರ್ ತಂದು
ಮಾಗಡಿಯಲ್ಲಿ ಟೈಪ್ ಮಾಡಿಸಿದ್ದೇವೆ. ವಾದಿ ಗೋವಿಂದರಾಜು ಇವರು ಸ್ಟ್ಯಾಂಪ್ ಪೇಪರ್ ನ್ನು ನೆಲಮಂಗಲದಿಂದ ತಂದಿದ್ದರು. ಆಗ ನಾನು ಮಾಗಡಿಯಲ್ಲಿ ಇದ್ದೇನು. ಅವರು ನನಗೆ ಫೋನ್ ಮಾಡಿ ನೆಲಮಂಗಲದಲ್ಲಿದ್ದೇವೆ. ಸ್ಟ್ಯಾಂಪ್ ಪೇಪರ್ ತೆಗೆದುಕೊಂಡು ಮಾಗಡಿಗೆ ಬರುತ್ತೇವೆ ಎಂದು ಹೇಳಿದ್ದರು. ದಿನಾಂಕಃ 08.12.2016 ರಂದು ಸ್ಟ್ಯಾಂಪ್ ಪೇಪರ್ ತಂದಿರುತ್ತಾರೆ. ಸ್ಟ್ಯಾಂಪ್ ಪೇಪರ್ ತರುವ 4-5 ದಿನಗಳ ಮೊದಲೇ ಕ್ರಯದ ವಿಚಾರವಾಗಿ ಮಾತುಕತೆ ಆಗಿತ್ತು. ಮಾತುಕತೆಯು ಪೆಮ್ಮನಹಳ್ಳಿಯಲ್ಲಿ ಆಗಿತ್ತು.

ಮುಂಗಡ ಹಣವನ್ನು ಅಗ್ರಿಮೆಂಟ್ ಮಾಡಿಸಿದ ದಿವಸ ಕೊಡುವುದಾಗಿ ಮಾತನಾಡಿದ್ದರು. ಮಾತುಕತೆಯು **ರೂ. 26,64,500/-** ಗಳಿಗೆ ಆಗಿತ್ತು. ಅದು ಒಟ್ಟು ಜಮೀನಿಗೆ ಬೆಲೆ ನಿಗದಿ ಆಗಿತ್ತು. ಕೋರ್ಟ್ ಮುಂದೆ ಇರುವ ಮಂಜುನಾಥ್ ಟೈಪಿಸ್ಟ್ ಬಳಿ ಕರಾರುಪತ್ರವನ್ನು ಟೈಪ್ ಮಾಡಿಸಿದ್ದೇವೆ. ಪತ್ರವನ್ನು ಕಂಪ್ಯೂಟರ್ ಮಾಡಿಲ್ಲ, ಟೈಪ್ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಟೈಪ್ ಮಾಡುವಾಗ ನಾನು ಅಲ್ಲಿಯೇ ಇದ್ದೇನು. ಆಗ ಜಮೀನು ಕೊಡುವವರು ತೆಗೆದುಕೊಳ್ಳುವವರು ಇದ್ದರು. ಕರಾರುಪತ್ರ ಆದ ದಿನ ರೂ. 5 ಲಕ್ಷ ವನ್ನು ನಗದಾಗಿ ಕೊಟ್ಟಿದ್ದಾರೆ. ವಾದಿಯು ಹಣವನ್ನು ಜೊತೆಗೆ ತಂದಿದ್ದರು. ಆ ದಿನ ಮುಂಗಡ ಹಣವನ್ನು ಚೆಕ್ ಮೂಲಕ ಕೊಟ್ಟಿಲ್ಲ. ದಾವಾ ಸ್ವತ್ತು 4 ನೇ ಪ್ರತಿವಾದಿಯ ತಂದೆಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ, ಅವರು ಎಸ್.ಸಿ ಸಮುದಾಯಕ್ಕೆ ಸೇರಿದವರು ಎಂದರೆ ಸರಿ.

ಮೊದಲು ಸ್ವತ್ತು 4 ನೇ ಪ್ರತಿವಾದಿ ತಂದೆಯ ಹೆಸರಿನಲ್ಲಿತ್ತು ನಂತರ ಅದು 4 ನೇ ಪ್ರತಿವಾದಿಗೆ ಖಾತೆ ಬದಲಾವಣೆ ಆಗಿದೆ. ಆ ಸ್ವತ್ತು ಹುಚ್ಚಹನುಮಯ್ಯ ಇವರು 4 ನೇ ಪ್ರತಿವಾದಿಗೆ ವಿಲ್ ಮೂಖಾಂತರ ಕೊಟ್ಟಿದ್ದರು ಎಂದರೆ ಸರಿ. ಅದರ ಪ್ರಕಾರ ಖಾತೆ ಪಹಣಿಗಳಾಗಿದ್ದವು ಎಂದರೆ ಸರಿ.

ಹುಚ್ಚಹನುಮಯ್ಯ ತೀರಿಕೊಂಡ ನಂತರ 4ನೆ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ. ದಾವಾ ಸ್ವತ್ತು 4ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಉಳಿದ ಪ್ರತಿವಾದಿಗಳಿಗೆ ಆ ಸ್ವತ್ತಿನಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಎಲ್ಲರೂ ಸೇರಿ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಪತ್ರವನ್ನು ಲಾಯರ್ ಆಫೀಸ್ ನಲ್ಲಿ ಟೈಪ್ ಮಾಡಿದ್ದಾರೆ. 4ನೇ ಪ್ರತಿವಾದಿಯು ರೂ. 5 ಲಕ್ಷ ಮುಂಗಡ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ದಿನಾಂಕ : 8.12.2016 ರಂದು ವಾದಿ ಮತ್ತು ಪ್ರತಿವಾದಿಗಳ ಮದ್ಯೆ ಯಾವುದೆ ಕರಾರುಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನೆಲಮಂಗಲದಿಂದ ಸ್ಟ್ಯಾಂಪ್ ಪೇಪರ್ ತಂದು ಮಾಗಡಿಯಲ್ಲಿ ಲಾಯರ್ ಆಫೀಸ್ ನಲ್ಲಿ ಟೈಪ್ ಮಾಡಿಸಿ ರೂ. 5 ಲಕ್ಷ ಮುಂಗಡ ಹಣವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ದಿನ 4ನೇ ಪ್ರತಿವಾದಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ : 5.03.2017 ರಂದು ವಾದಿಯ ಮನೆಯಲ್ಲಿ ರೂ. 50 ಲಕ್ಷವನ್ನು 4ನೇ ಪ್ರತಿವಾದಿಗೆ ಕೊಟ್ಟಿದ್ದೇವೆ. ಆಗ ನಾನು ಇದ್ದೇನು. ವಾದಿಯ ಮನೆ ಮೋಟಗಾನಹಳ್ಳಿಯಲ್ಲಿದೆ. ರೂ. 50 ಸಾವಿರ ಹಣ ಪಡೆದ ಬಗ್ಗೆ 4ನೇ ಪ್ರತಿವಾದಿಯೇ ಷರಾ ಬರೆದುಕೊಟ್ಟಿದ್ದಾರೆ. ಆ ಸಮಯದಲ್ಲಿ ನಾನು ಮತ್ತು ರುದ್ರೇಶ್ ಎಂಬುವವರು ಇದ್ದೇವು. ರೂ.50 ಸಾವಿರ ಹಣ ಕೊಡುವ ಸಮಯದಲ್ಲಿ ಮಂಜುನಾಥ್ ಲಾಯರ್ ಇರಲಿಲ್ಲ. ಷರಾಗೆ ಮಂಜುನಾಥ್ ಲಾಯರ್ ಸಹಿ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಇನ್ನೊಬ್ಬ ಸಾಕ್ಷಿದಾರ ರುದ್ದೇಶ್ ಪೆಮ್ಮನಹಳ್ಳಿಯವರು. ಅವರು ಸಹ ಬದುಕಿದ್ದಾರೆ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**